ಓ.ಎಸ್.ನಂ.**09/2011**
ಪಿಡಬ್ಲ್ಯೂ .**2**

ಪ್ರಮಾಣ ವಚನ ಬೋಧಿಸಿದ ದಿನಾಂಕಃ **17.02.2025.**
ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋದಿಸಲಾಯಿತು.

<u>ಪಾಟೀ ಸವಾಲುಃ 3ನೇ ಪ್ರತಿವಾದಿ ಪರ ಶ್ರೀ ಎ.ಕೆ. ವಕೀಲರಿಂದ</u>

ನಾನು ಮೆಣಸಿ ಕಾಲೋನಿಯಲ್ಲಿ ವಾಸ ಮಾಡುತ್ತಿದೇನೆ. ದಾವಾ ಆಸ್ತಿಯು ಕೆಸ್ತೂರು ಗ್ರಾಮದಲ್ಲಿ ಇದೆ. ನಮ್ಮ ಮನೆಯಿಂದ ದಾವಾ ಆಸ್ತಿಗೆ **1000**–ಮೀಟರ್ ದೂರವಾಗುತ್ತದೆ. ದಾವಾ ಆಸ್ತಿಯ ಅಕ್ಕಪಕ್ಕದಲ್ಲಿ ನನಗೆ ಸೇರಿದ ಸರ್ವೆ ನಂಬರ್ **124**ರಲ್ಲಿ **1**–ಎಕರೆ **15**–ಗುಂಟೆ ಜಮೀನಿದೆ. ಸದರಿ ಜಮೀನು ನನ್ನ ಹೆಸರಿನಲ್ಲಿ ಇದೆ. ಅದರ ದಾಖಲೆಗಳನ್ನು ನ್ಯಾಯಾಲಯಕ್ಕೆ ಕೊಟ್ಟಿಲ್ಲ. ನನ್ನ ಅಸ್ತಿಯ ಪಶ್ಚಿಮಕ್ಕೆ ದಾವಾ ಆಸ್ತಿ ಇದೆ. ನನಗೆ ಯಾವುದೇ ಆಸ್ತಿ ಇಲ್ಲ ದಾವಾ ಆಸ್ತಿಯ ಅಕ್ಕಪಕ್ಕದಲ್ಲಿ ನನಗೆ ಸೇರಿದ ಯಾವುದೇ ಆಸ್ತಿ ಇಲ್ಲದಿದ್ದರು ಕೂಡ ವಾದಿಗೆ ಸಹಾಯ ಮಾಡಲು ಉದ್ದೇಶದಿಂದ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ವಾದಿಯು ನನ್ನ ಸಂಬಂದಿಕರಲ್ಲ ಆದರೆ ನನ್ನ ಸ್ನೇಹಿತರು. ವಾದಿಯ ತಂದೆಯ ಹೆಸರು ನಂಜುಂಡಪ್ಪ ಹಾಗೂ ವಾದಿಯ ಗಂಡನ ಹೆಸರು ಗೊತ್ತಿಲ್ಲ. ವಾದಿಗೆ ಎಷ್ಟು ಜನ ಅಣ್ಣ ತಮ್ಮಂದಿರು ಹಾಗೂ ಅಕ್ಕ ತಂಗಿಯರು ಇದ್ದಾರೆ ಎಂದು ಗೊತ್ತಿಲ್ಲ.

ದಾವಾ ಆಸ್ತಿಯ ದಾಖಲೆಯನ್ನು ನೋಡಿಲ್ಲ. ದಿನಾಂಕಃ **01.12.2006**ರಲ್ಲಿ ಅಂಜಿನಪ್ಪ ಬಿನ್ ಮುನಿಯಪ್ಪ ಉರಫ್ ಮುನಿಶಾಮಪ್ಪ ಹಾಗೂ ಅವರ ಏಕೈಕ ಮಗಳಾದ ಸರೋಜಮ್ಮನವರು ಸೇರಿ ದಾವಾ ಆಸ್ತಿಯನ್ನು ಶುದ್ದ ಕ್ರಯಕ್ಕೆ **3**ನೇ ಪ್ರವಾದಿಯವರಿಗೆ ಮಾರಟ ಮಾಡಿದ್ದಾರೆ ಎಂದರೆ ಗೂತ್ತಿಲ್ಲ. ಸದರಿ ಕ್ರಯಪತ್ರದ ಆಧಾರದ ಮೇಲೆ ದಾವಾ ಆಸ್ತಿಯು ಎಮ್.ಆರ್.**33/2006–07**ರಂದು ಪಹಣಿಯು **3**–ನೇ ಪ್ರತಿವಾದಿಯವರ ಹೆಸರಿಗೆ ಬದಲಾವಣೆವಾಗಿದೆ ಎಂದರೆ ಗೊತ್ತಿಲ್ಲ. ಕ್ರಯಪತ್ರದ ಆಧಾರದ ಮೇಲೆ **3**–ನೇ ಪ್ರತಿವಾದಿಯೇ ದಾವಾ ಆಸ್ತಿಯಾ ಸ್ವಾಧೀನ ಹೊಂದಿದ್ದಾರೆ ಎಂದರೆ ಸರಿಯಲ್ಲ. ಸಾಕ್ಷಿಯು ಮುಂದುವರೆದ ವಾದಿಯೇ ಸುಮಾರು **25**–ವರ್ಷದಿಂದ ಸ್ವಾಧೀನ ಹೊಂದಿದ್ದಾರೆ ಎಂದು ಹೇಳುತ್ತಾರೆ. ನನಗೆ ದಾವಾ ಆಸ್ತಿಯ ಬಗ್ಗೆ ಯಾವುದೇ ಮಾಹಿತಿ ಇಲ್ಲದಿದ್ದರೂ ಕೂಡ ವಾದಿಯು ನನ್ನ

ಸ್ನೇಹಿತರಾದ ಕಾರಣ ಅವರಿಗೆ ಸಹಾಯ ಮಾಡುವ ಉದ್ದೇಶದಿಂದ ನಾನು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇರುವುದಿಲ್ಲ**

(ನನ್ನ ಉಕ್ತಲೇಖಕ್ಕೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸರಿ ಇದೆ

ಹಿರಿಯ ಸಿವಿಲ್ ನ್ಯಾಯಾಧೀಶರು
ದೊಡ್ಡಬಳ್ಳಾಪುರ